**ಓಎಸ್. ನಂ.*202/2022***

**ಪಿಡಬ್ಲೂ *: 01***

**ಇಂದು ದಿನಾಂಕ*:29.07.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ.ಟಿ.ಎಸ್.ಆರ್.ವಕೀಲರಿಂದಃ**

ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನಮ್ಮ ತಂದೆ ಮತ್ತು ತಾಯಿ ಮೃತ ಪಟ್ಟಿರುವ ದಿನಾಂಕವನ್ನು ನನ್ನ ವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ನಮ್ಮ ಕುಟುಂಬ ರೈತಾಬಿ ಕುಟುಂಬ ಎಂದರೆ ಸರಿ. ನನ್ನ ತಂದೆ ಸಂಪಾದಿಸಿದ ಎಲ್ಲ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ವಾಸವಾಗಿದ್ದ ಮನೆಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ವಾಸ ಮಾಡುತ್ತಿರುವ ಮನೆಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ವಾದ ಪತ್ರದಲ್ಲಿ ಬರೆದಿರುವ ವಿಷಯವನ್ನು ನಾನು ತಿಳಿದುಕೊಂಡಿಲ್ಲ. ನನ್ನ ತಂದೆ ಜೀವಂತವಾಗಿ ಇದ್ದಾಗ ಯಾವ ಯಾವ ಆಸ್ತಿಗಳನ್ನು ಸಂಪಾದಿಸಿದ್ದರು ಅಂತ ಗೊತ್ತಿದ್ದೆ. ಸರ್ವೆ ನಂ.288/11 ರಲ್ಲಿ 23 ಗುಂಟೆ, ಅದರಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದೇವೆ. ಸರ್ವೆ ನಂ.11 ರಲ್ಲಿ 4 ಎಕರೆ ದರ್ಕಾಸ್ತು ಮೂಲಕ ಮಂಜೂರು ಆಗಿದೆ. ನನ್ನ ತಂದೆಯ ತಂದೆ ಹೆಸರು ಕ್ಯಾತಮರಿಗೌಡ. ಕ್ಯಾತಮರಿಗೌಡರಿಂದ ನನ್ನ ತಂದೆಗೆ ಯಾವುದೇ ಆಸ್ತಿ ಬಂದಿರಲಿಲ್ಲ. ಯಗಡಿಕೊಪ್ಪಲಿನಲ್ಲಿ ಇರುವ ಒಂದು ಹಲೆ ಮನೆ ಇನ್ನು ಹಾಗೇ ಇದೆ ಎಂದರೆ ಸರಿ. ಆ ಮನೆಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ತಂದೆಗೆ ಯಗಡಿಕೊಪ್ಪಲಿನಲ್ಲಿ ಸಾಕಷ್ಟು ಚರಾಸ್ಥಿ ಮತ್ತು ಸ್ಥಿರಾಸ್ಥಿ ಇದೆ ಎಂದರೆ ಸರಿಯಲ್ಲ. ಶೋಭ ಎಂದರೆ ನನ್ನ ಪತ್ನಿ. ನನ್ನ ಮತ್ತು ನನ್ನ ಪತ್ನಿ ಜಂಟಿ ಹೆಸರಿನಲ್ಲಿ 2 ಎಕರೆ ಜಮೀನು ಮಂಜೂರು ಆಗಿದೆ ಎಂದರೆ ಸರಿ. ನಾವು ಬೇರೆ ಆದ ಮೇಲೆ ನಮಗೆ 2 ಎಕರೆ ಜಮೀನು ಮಂಜೂರು ಆಗಿದೆ. ಬೇರೆ ಆದ ನಂತರ 2 ಎಕರೆ ಜಮೀನು ಮಂಜೂರು ಆಗಿದೆ ಅಂತ ನನ್ನ ವಾದ ಪತ್ರದಲ್ಲಿ ಬರೆಸಿದ್ದೇನೆ. ಈ ಕೇಸಿನಲ್ಲಿ ನಾನು ಭಾಗ ಆಗಿಲ್ಲ ಭಾಗ ಕೊಡಿ ಅಂತ ಕೇಳಿದ್ದೇನೆ ಎಂದರೆ ಸರಿ. 1998 ರಲ್ಲಿ ನನ್ನ ಮತ್ತು ನನ್ನ ಪತ್ನಿ ಜಂಟಿ ಹೆಸರಿಗೆ ಮಂಜೂರು ಆಗಿರುವ 2 ಎಕರೆ ಜಮೀನನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ನಮಗೆ ಮಂಜೂರು ಆಗಿರುವ ಸದರಿ 2 ಎಕರೆ ಜಮೀನನ್ನು ಈ ಕೇಸಿನಲ್ಲಿ ಸೇರಿಸಲು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಜೀವಂತವಿದ್ದಾಗ ನನ್ನ ಮತ್ತು ನನ್ನ ಪತ್ನಿ ಹೆಸರಿಗೆ ಜಮೀನು ಮಂಜೂರು ಆಗಿದೆ ಎಂದರೆ ಸರಿ. ಆದ್ದರಿಂದ ಅದು ನಮ್ಮ ಒಟ್ಟು ಕುಟುಂಬದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. 1998 ಕಿಂತ ಮೊದಲೆ ನಾನು ಮತ್ತು ನನ್ನ ಪತ್ನಿ ಕುಟುಂಬದಿಂದ ಪ್ರತ್ಯೇಕವಾಗಿದ್ದೇವೆ ಅಂತ ದಾವೆಯಲ್ಲಿ ಬರೆಸಿಲ್ಲ. ನನ್ನ ಮತ್ತು ನನ್ನ ಪತ್ನಿ ಜಂಟಿ ಹೆಸರಿನಲ್ಲಿ ಮಂಜೂರು ಆಗಿರುವ ಜಮೀನಿನಲ್ಲಿ ಪ್ರತಿವಾದಿ 3 ಮತ್ತು 4 ರವರಿಗೆ ಭಾಗಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಪತ್ನಿ ಜಂಟಿ ಹೆಸರಿನಲ್ಲಿ ಮಂಜೂರು ಆಗಿರುವ ಜಮೀನನ್ನು ಸೇರಿಸಿ ಪ್ರತಿವಾದಿ 3 ಮತ್ತು 4 ರವರು ಹುಣಸೂರಿನ ನ್ಯಾಯಾಲಯದಲ್ಲಿ ಕೇಸು ಹಾಕಿದ್ದಾರೆ ಎಂದರೆ ಸರಿ.  ಆ ಕೇಸಿನಲ್ಲಿ ನಮ್ಮ ವಕೀಲರನ್ನು ನೇಮಿಸಿಕೊಂಡು ಲಿಖಿತ ಹೇಳಿಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಹುಣಸೂರು ನ್ಯಾಯಾಲಯದಿಂದ ನೋಟಿಸು ಬಂದ ನಂತರ ಈ ಕೇಸು ಹಾಕಿದ್ದೇನೆ. ನನ್ನ ಸಹೋದರಿಯರು ನನ್ನ ತಂದೆಯ ಸಮಸ್ತ ಆಸ್ತಿಯ ಮೇಲೆ ಕೇಸು ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಹೇಳುವುದೇನೆಂದರೆ ಒಬ್ಬೊಬ್ಬರಿಗೆ 100 ಗ್ರಾಮ್ ಚಿನ್ನ ಹಾಗೂ ತಲಾ 2 ಲಕ್ಷ ಕೊಟ್ಟಿರುತ್ತೇವೆ. ಈ ವಿಚಾರವನ್ನು ನನ್ನ ಸಹೋದರಿಯರು ಸಲ್ಲಿಸಿರುವ ದಾವೆಯಲ್ಲಿ ಲಿಖಿತ ಹೇಳಿಕೆ ರೂಪಾದಲ್ಲಿ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಮತ್ತು ನನ್ನ ಪತ್ನಿ ಹೆಸರಿಗೆ ಮಂಜೂರು ಆಗಿರುವ ಆಸ್ತಿಯನ್ನು ಸೇರಿಸಿಲ್ಲದ ಕಾರಣ partial partition ಕಾನೂರು ಪ್ರಕಾರ ಊರ್ಜಿತವಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ತಂಬಾಕು ಲೈಸನ್ಸ್ ಇರುವುದಿಲ್ಲ. ನನ್ನ ಹೆಸರಿನಲ್ಲಿ ಬ್ಯಾರನ್ ಇದೆ. ಈ ಊರಿನಿಂದ ಬೈಕ್‌ನಲ್ಲಿ ಬಂದಿದ್ದೇನೆ. ಆ ಬೈಕು ನನ್ನ ಅಳಿಯ ಮಂಜುನಾಥ ಹೆಸರಿನಲ್ಲಿ ಇದೆ. ಆ ಬೈಕ್ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಆ ಬೈಕ್ ನನ್ನ ಹೆಸರಿನಲ್ಲ ಇರುವುದಿಲ್ಲ ಎಂದು ತೋರಿಸಲು ಮುಂದಿನ ದಿನಾಂಕಂದು ಹಾಜರು ಪಡಿಸಲು ಸಾಧ್ಯವಿರುವುದಿಲ್ಲ. ನನ್ನ ಅಳಿಯನನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷ್ಯ ಹೇಳಿಸಲು ತೊಂದರೆ ಇರುವುದಿಲ್ಲ. ನನ್ನ ಹೆಸರಿನಲ್ಲಿ ಟ್ರ್ಯಾಕ್ಟರ್ ಇರುವುದಿಲ್ಲ. ಪ್ರತಿವಾದಿ 1 ಮತ್ತು 2 ರವರು ಪ್ರತ್ಯೇಕವಾಗಿ ಬೇರೆ ಬೇರೆ ಮನೆಗಳಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಆ ಮನೆಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಏಕೆಂದರೆ ಆ ಮನೆಗಳು ಸಹಾ ಸರ್ವೆ ನಂ.278/2 ರ 23 ಗುಂಟೆ ಜಮೀನಿನಲ್ಲಿ ಬರುತ್ತದೆ.

**ಓಎಸ್. ನಂ.*202/2022***

**ಪಿಡಬ್ಲೂ *: 01***

ಆದೆ ಸರ್ವೆ ನಂಬರ್ ನಲ್ಲಿ ಇರುವ ಮನೆಯಲ್ಲಿ ನಾನು ವಾಸವಿದ್ದೇನೆ. ನಾನು ಮತ್ತು ಪಾಪೇಗೌಡ ಸ್ವಂತ ಹಣದಿಂದ ಮನೆ ಕಟ್ಟಿದ್ದೇವೆ ಅಂತ ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. 1 ನೇ ಪ್ರತಿವಾದಿ ಧರ್ಮಪುರದಲ್ಲಿ ವಾಸವಿದ್ದಾರೆ ಎಂದರೆ ಸರಿ. ಅವರು ಧರ್ಮಪುರಕ್ಕೆ ಯಾಕೆ ಹೋಗಿದ್ದಾರೆ ಅಂತ ನನ್ನ ದಾವೆಯಲ್ಲಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ದೌರ್ಜನ್ಯವನ್ನು ತಡೆಯಲಾರದೆ 1 ನೇ ಪ್ರತಿವಾದಿ ಧರ್ಮಪುರಕ್ಕೆ ಹೋಗಿ ವಾಸವಿದ್ದಾರೆ ಎಂದರೆ ಸುಳ್ಳು. ಮದುವೆಯಾಗುವವರೆಗೂ ನನ್ನ ಸಹೋದರಿಯರು ನಮ್ಮ ಕುಟುಂಬದಲ್ಲಿ ಶ್ರಮಿಸಿದ್ದಾರೆ ಎಂದರೆ ಸರಿ. ನನಗೆ ಮತ್ತು ನನ್ನ ಪತ್ನಿ ಹೆಸರಿಗೆ ಜಂಟಿಯಾಗಿ ಮಂಜೂರು ಆಗಿರುವ ಜಮೀನಿಗೆ ಗಿಡಗಂಟೆಗಳನ್ನು ಕಿತ್ತು ವ್ಯವಸಾಯಕ್ಕೆ ಯೋಗ್ಯವನ್ನಾಗಿ ಮಾಡಲು ಶ್ರಮಿಸಿದ್ದಾರೆ ಎಂದರೆ ಸುಳ್ಳು. ಸದರಿ ಜಮೀನಿನಲ್ಲಿ ನಾನು ಮತ್ತು ನನ್ನ ಪತ್ನಿ ಮಾತ್ರ ಶ್ರಮಿಸಿದ್ದೇವೆ ಎಂದು ವಾದ ಪತ್ರದಲ್ಲಿ ಬರೆಸಿಲ್ಲ ಏಕೆಂದರೆ ಅದು ನಮ್ಮ ಸ್ವಯಾರ್ಜಿತ ಜಮೀನು. ಅದು ಕೂಡ ನಮ್ಮ ಒಟ್ಟು ಕುಟುಂಬದ ಜಮೀನು ಎಂದರೆ ಸುಳ್ಳು.

ಸುಮಾರು 25 ವರ್ಷದ ಹಿಂದೆ ಕಾಡು ಕಡೆಯಲು ಪ್ರಾರಂಭಿಸಿದ್ದೆ. ಕಾಡು ಕಡೆಯಲು ಪ್ರಾರಂಭಿಸಿದ್ದಾಗ ನಾವೆಲ್ಲರೂ ಒಟ್ಟಾಗಿ ಇದ್ದೇವೆ ಎಂದರೆ ಸುಳ್ಳು, ಬೇರೆ ಆಗಿದ್ದೆ. ಆಗಲೂ ಸಹಾ 23 ಗುಂಟೆ ಜಮೀನಿನಲ್ಲಿ ಇರುವ ಮನೆಯಲ್ಲಿ ವಾಸವಾಗಿದ್ದೆ. 23 ಗುಂಟೆ ಜಮೀನು ತೆಗೆದುಕೊಂಡ ನಂತರ ಕಾಡು ಕಡೆಯಲು ಪ್ರಾರಂಭಿಸಿದ್ದೆ. ನನ್ನ ಸಹೋದರಿಯರ ಮದುವೆ ಯಾವಾಗ ಆಗಿದೆ ಅಂತ ದಿನಾಂಕ ಗೊತ್ತಿಲ್ಲ, ಆದರೆ ನನ್ನ ತಂದೆ ಬದುಕಿದ್ದಾಗಲೆ ಆಗಿದೆ. 3 ನೇ ಪ್ರತಿವಾದಿಗೆ ಮದುವೆ ಆಗುವ ಕಾಲಕ್ಕೆ 18 ವರ್ಷ. ನನಗೆ 23 ವರ್ಷ ಆಗಿದ್ದಾಗ 4 ನೇ ಪ್ರತಿವಾದಿಗೆ ಮದುವೆ ಆಗಿದೆ. ಅವರಿಬ್ಬರ ಮದುವೆ ಕಾಲಕ್ಕೆ ನಮ್ಮ ತಂದೆ ಎಷ್ಟು ಹಣ ಕಾಸನ್ನು ಎಲ್ಲಿ  ಹೋಂದಿಸಿಕೊಂಡಿದ್ದರು ಮತ್ತು ಎಷ್ಟು ಖರ್ಚು ಮಾಡಿದ್ದಾರೆ ಅಂತ ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿ 3 ಮತ್ತು 4 ರವರ ಗಂಡನ ಮನೆಯವರು ಅಗರ್ಭ ಶ್ರೀಮಂತರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 3 ಮತ್ತು 4 ರವರ ಮದುವೆಗೆ ಎಷ್ಟು ಖರ್ಚು ಮಾಡಿದ್ದೇನೆ ಅಂತ ನಮ್ಮ ತಂದೆ ಹೇಳಿದ್ದರು. ಈ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ.

ನಮ್ಮ ತಂದೆ ಪ್ರತಿವಾದಿ 3 ಮತ್ತು 4 ರವರಿಗೆ ತಲಾ 100 ಗ್ರಾಮ್ ಚಿನ್ನ ಮತ್ತು 2 ಲಕ್ಷ ರೂಪಾಯಿ ಕೊಟ್ಟು ಮದುವೆ ಮಾಡಿದ್ದಾರೆ ಅಂತ ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ಆ ರೀತಿ ಚಿನ್ನದ ವಡವೆಗಳನ್ನು ಮಾಡಿಸಿರುವ ರಸೀದಿಗಳನ್ನು ತಂದಿಲ್ಲ. ಆ ರೀತಿ ರಸೀದಿಗಳನ್ನು ಹಾಜರು ಪಡಿಸಲು ಸಾಧ್ಯವಿಲ್ಲ ಏಕೆಂದರೆ ಅದನ್ನು ಹಿಂದೆ ಮಾಡಿಸಿದ್ದೇವು. ಪ್ರತಿವಾದಿ 1 ಮತ್ತು 2 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿರುವುದನ್ನು ನಾನು ತಿಳಿದುಕೊಂಡಿಲ್ಲ. ಪ್ರತಿವಾದಿ 3 ಮತ್ತು 4 ರವರಿಗೆ ಚಿನ್ನ ಮತ್ತು ನಗದು ಹಣ ಕೊಟ್ಟಿಲ್ಲ ಅವರನ್ನು ಬಡವರ ಮನೆಗೆ ಕೊಟ್ಟು ನಮ್ಮ ಮನೆಯಲ್ಲೇ ಮದುವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು 5 ಜನ ಮಕ್ಕಳನ್ನು ಸಾಕಲು ನಮ್ಮ ತಂದೆಗೆ ಕಷ್ಟವಾಗಿತ್ತು ಎಂದರೆ ಸರಿಯಲ್ಲ. ನಮ್ಮ ತಂದೆಗೆ ಮದುವೆ ಮಾಡಲು ಕಷ್ಟವಾಗಿದ್ದ ಕಾರಣ ಪ್ರತಿವಾದಿ 3 ಮತ್ತು 4 ರವರನ್ನು ಬಡವರ ಮನೆಗೆ ಕೊಟ್ಟು ಕೈತೊಳೆದುಕೊಂಡರು ಎಂದರೆ ಸರಿಯಲ್ಲ. ನನಗೆ, ನನ್ನ ತಂದೆಗೆ ಮತ್ತು ಪ್ರತಿವಾದಿ 1 ಮತ್ತು 2 ರವರಿಗೆ ತಲಾ ಒಂದೊಂದು ಮನೆ ಇದೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಹೇಳಿರುವಂತೆ 23 ಗುಂಟೆ ವಿಸ್ತೀರ್ಣದಲ್ಲಿ 2 ಮನೆ ಮಾತ್ರ ಇವೆ ಎಂದರೆ ಸರಿಯಲ್ಲ, ಅದರಲ್ಲಿ 3 ಮನೆ ಇವೆ. ನಿ.ಪಿ.9 ರಲ್ಲಿ ಗುರುತಿಸಿರು ಫೋಟೊದಲ್ಲಿ ಕಂಡು ಬರುವ ವ್ಯಕ್ತಿ ನಾನೇ, ಆ ಫೋಟೊದಲ್ಲಿ ಕಂಡು ಬರುವ ಎತ್ತಿನ ಗಾಡಿಯೋ ನನ್ನದೆ, ಅದನ್ನು ವಾದ ಪತ್ರದಲ್ಲಿ ಸೇರಿಸಿಲ್ಲ. ನನಗೆ ಒಂದು ಜೊತೆ ಎತ್ತುಗಳು ಇವೆ. ಕುರಿ ಇರುವುದಿಲ್ಲ. ಎತ್ತುಗಳನ್ನು ವಾದ ಪತ್ರದಲ್ಲಿ ಸೇರಿಸಿಲ್ಲ. ದಾವಾ ಐಟಂ.2 ರ ಆಸ್ತಿಯಲ್ಲಿ 3 ಬ್ಯಾರನ್‌ಗಳು ಇವೆ. ಅದರಲ್ಲಿ ಇರುವ ಬ್ಯಾರನ್ ಸುತ್ತ ಇರುವ ವಸಾರು ಮತ್ತು ಪಕ್ಕದಲ್ಲಿ ಇರುವ ವಾಸದ ಮನೆ ನನ್ನದು. ಉಳಿದ ಎರಡು ಬ್ಯಾರನ್‌ಗಳಲ್ಲಿ ಪ್ರತಿವಾದಿ 1 ಮತ್ತು 2 ರವರಿಗೆ ಒಂದೂಂದು ಬ್ಯಾರನ್ ಇವೆ. 3 ಬ್ಯಾರನ್ ಗಳ ಪೈಕಿ 2 ಬ್ಯಾರನ್‌ಗಳನ್ನು ಸೇರಿಸಿದ್ದೇವೆ. ನನ್ನ ತಂದೆ ಹೆಸರಿನಲ್ಲಿ ಮಾತ್ರ 2 ಬಾರನ್ ಸೇರಿಸಿದ್ದೇವೆ. ಸಾಕ್ಷಿಯೂ ಮುಂದುವರೆದು ಹೇಳುವುದೇನೆಂದರೆ ಒಂದೇ ಲೈಸೆನ್ಸ್ ಇದೆ, ಬ್ಯಾರನ್ ಎರಡು ಇದೆ. ಸಿಂಗಲ್ ಬ್ಯಾರನ್ ಸಾಮರ್ಥ್ಯ 1200 ಕೆ.ಜಿ. ಡಬಲ್ ಬ್ಯಾರನ್ 2400 ಕೆ.ಜಿ. ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಬದುಕಿರುವವರೆಗೂ ಹೊಗೆ ಸೊಪ್ಪನ್ನು ಅವರ ಹೆಸರಿನಲ್ಲಿ ಇರುವ ಲೈಸೆನ್ಸ್ ನಲ್ಲಿ ಮಾರಾಟ ಮಾಡುತ್ತಿದ್ದೆ.

**ಓಎಸ್. ನಂ.*202/2022***

**ಪಿಡಬ್ಲೂ *: 01***

ಈಗ ಬೇರೆಯವರ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದೇನೆ. ದಾವಾ ಐಟಂ.1 ರಲ್ಲಿ ನಾನು ಮತ್ತು ಪ್ರತಿವಾದಿ 1 ಮತ್ತು 2 ರವರು ಒಟ್ಟಾಗಿ ಉಳುಮೆ ಮಾಡುತ್ತಿದ್ದೇವೆ. ಕಳೆದ 20 ವರ್ಷಗಳಿಂದ ಹೊಗೆ ಸೊಪ್ಪು ಬೆಳೆಯುತ್ತಿದ್ದೇನೆ.

**ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**